



ಚಿತ್ರ ಕೃಪೆ: ಲ್ಯಾಂಡ್‌ಸ್ಕೇಪ್ ವಿಝಾರ್ಡ್ಸ್

ಭತ್ತವನ್ನು ದೋಣಿಯಲ್ಲಿ ಹೋಗಿ ಕೊಯ್ಯುವುದು, ಜೊತೆಗೆ ನದಿಯ ಜಲಾನಯನ ಪ್ರದೇಶದ ಗುಡ್ಡದ ಮೇಲಿನ ಮೇದಿನಿಯಲ್ಲಿ ಬೆಳೆಯುವ ಪರಿಮಳದ ಸಣ್ಣ ಅಕ್ಕಿಯ ಕಥೆ ಈ ನದಿಯ ಒಡಲಿನ ಜೈವಿಕ ವೈವಿಧ್ಯವನ್ನು ಬಿಂಬಿಸುತ್ತದೆ.

ಜನಜೀವನದ ಜೊತೆಗೆ ಅಘನಾಶಿನಿ ಕೊಳ್ಳದಲ್ಲಿರುವ ಅಪರೂಪದ ವನ್ಯಪ್ರಾಣಿ ಪ್ರಪಂಚದ ಪರಿಚಯವನ್ನೂ ಈ ಸಾಕ್ಷ್ಯಚಿತ್ರದಲ್ಲಿ ನೋಡಬಹುದು. ಸಿಂಹಳೀಕ ಕೋತಿ ಜಾತಿಗೆ ಸೇರಿದ ವನ್ಯಪ್ರಾಣಿಯ ಉಳಿವಿಗಾಗಿ ಕೇರಳದ ಶಾಂತಿ ಕಣಿವೆಯಲ್ಲಿ ಕಟ್ಟಬೇಕೆಂದಿದ್ದ ಜಲ ವಿದ್ಯುತ್ ಯೋಜನೆಯ ವಿರುದ್ಧ ಚಳವಳಿ ನಡೆಯಿತು. ಇಂತಹ ಸಿಂಹಳೀಕ, ಕುಟುಂಬ ಎತ್ತರದ ಮರದ ಪೊಟರೆಯಲ್ಲಿರುವ ಜೇನುಗೂಡಿನಿಂದ ಜೇನುತುಪ್ಪವನ್ನು ತೆಗೆದು ತಿನ್ನುವ ದೃಶ್ಯ ಅಪರೂಪದ್ದೇ. ಉಂಚಳ್ಳಿ ಜಲಪಾತದ ಕಡಿದಾದ ಕಲ್ಲಿನ ಮೇಲೆ ತಮ್ಮ ಕಾಲನ್ನು ಎತ್ತಿ ನೃತ್ಯ ಮಾಡುವ ಕಪ್ಪೆಗಳ ದೃಶ್ಯ ಗಮನ ಸೆಳೆಯುತ್ತದೆ. ರಾತ್ರಿ ಸಮಯದಲ್ಲಿ ಹೊಳೆಯುವ ಶಿಲೀಂಧ್ರಗಳನ್ನು ನೋಡುವುದೇ ಒಂದು ವಿಶೇಷ ಅನುಭವ. ಜಲಪಾತದಿಂದ ಸೃಷ್ಟಿ ಆಗುವ ಚಂದ್ರ ಬಿಲ್ಲಿನ ಸೊಬಗು ಅಷ್ಟೇ ವಿಶಿಷ್ಟ.

‘ಚಿತ್ರದಲ್ಲಿ ಕೇವಲ ಒಳ್ಳೆಯ ಅಂಶಗಳನ್ನು ಮಾತ್ರ ತೋರಿಸಲಾಗಿದೆ. ಅಡಿಕೆ ತೋಟಕ್ಕಾಗಿ, ಅಕೇಶಿಯಾ ನೆಡುತೋಪಿಗಾಗಿ ಕಡಿದ ಕಾಡಿನ ವಿವರ ಇಲ್ಲ’ ಎಂಬ ಪರಿಸರ ಬರಹಗಾರ ಶಿವಾನಂದ ಕಳವೆ ಅವರ ಅಭಿಪ್ರಾಯ ನಿಜವೇ. ಆದರೆ, ನದಿಯ ಉಳಿವಿಗಾಗಿ, ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದ ಈ ಚಿತ್ರ ಸಾಹಸ ಪ್ರಶಂಸಾರ್ಹ.

ಚಿತ್ರದಲ್ಲಿ ಕಂಡು ಬರುವ ನದಿಯ ಕೆಂಪು ಬಣ್ಣದ ನೀರು ಮಳೆಗಾಲದಲ್ಲಿನ ಮನಮೋಹಕ ದೃಶ್ಯ ಎಂದು ಅನಿಸ ಬಹುದು. ಆದರೆ ವಾಸ್ತವಿಕವಾಗಿ, ಇದು ನದಿಯ  ಒಡಲಿನ ಜನರು ನಡೆಸುತ್ತಿರುವ ಅತ್ಯಾಚಾರದ ಪ್ರತೀಕ. ನದಿಯ ಜಲಾನಯನ ಪ್ರದೇಶದಲ್ಲಿ ಹಸಿರು ನಾಶ ಮಾಡಿದ್ದರ ಪರಿಣಾಮ. ನದಿಯ ಮೂಲದಲ್ಲಿ ಸಮೃದ್ಧ ಹಸಿರಿನ ಕವಚ ಇದ್ದಲ್ಲಿ ಭೂಮಿಯ ಮೇಲ್ಪದರಿನ ಮಣ್ಣು ಸವಕಳಿ ಆಗದೇ ಮಳೆಗಾಲದಲ್ಲಿಯೂ ನದಿಯ ನೀರು ಕೆಂಪು ರಕ್ತದ ಬಣ್ಣಕ್ಕೆ ತಿರುಗುವುದಿಲ್ಲ. ಅದೇ ಅಘನಾಶಿನಿಯ ಉಪನದಿ ಬಿಳಿ ಹೊಳೆಯ ನೀರು ಸ್ಪಟಿಕದ ಹಾಗೇ ಇರುವದನ್ನು ಚಿತ್ರದಲ್ಲಿ ನೋಡುತ್ತೇವೆ. ಇದು ನದಿಯು ಅರೋಗ್ಯವಾಗಿದೆ ಎಂಬುದರ ಸೂಚಕ. ಈ ಮೂಲಭೂತ ಅಂಶಗಳನ್ನು ಸಶಕ್ತವಾಗಿ ಸೆರೆ ಹಿಡಿದರೂ ಚಿತ್ರಬಂಧದಲ್ಲಿ (ಸ್ಕ್ರಿಪ್ಟ್‌ನಲ್ಲಿ) ಇದರ ವಿವರಣೆ ಇಲ್ಲದ್ದು ಕೊರತೆ.

ಸಾಕ್ಷ್ಯಚಿತ್ರದ ನಿರ್ಮಾಣದ ಹಂತದಲ್ಲಿ ನದಿಯ ಕುರಿತು 35 ಕಥೆಗಳನ್ನು ದಾಖಲಿಸಿದ್ದಾಗಿ ನಿರ್ಮಾಪಕರು ಹೇಳುತ್ತಾರೆ. ಆದರೆ ಸಾಕಷ್ಟು ಅತ್ಯುತ್ತಮ ದೃಶ್ಯಗಳ ನಡುವೆಯೂ 40 ನಿಮಿಷದ ಈ ಚಿತ್ರದಲ್ಲಿ ದೃಶ್ಯಗಳನ್ನು ಒಂದು ಗೂಡಿಸಿ ನೋಡುಗರಿಗೆ ಅಘನಾಶಿನಿಯನ್ನು ಕಥೆಯಾಗಿ ಕಟ್ಟಿಕೊಡುವ, ನದಿಯ ಸ್ವಚ್ಛಂದತೆಯನ್ನು ಅಷ್ಟೇ ಸ್ವಚ್ಛಂದವಾಗಿ ನಿರೂಪಿಸುವ ಪ್ರಯತ್ನ ಇನ್ನೂ ಪರಿಣಾಮಕಾರಿ ಆಗಬೇಕಿತ್ತು. ಇಂಗ್ಲಿಷಿನ ಅವತರಣಿಕೆಯಿಂದ ನೇರವಾಗಿ ಕನ್ನಡಕ್ಕೆ ಅನುವಾದ ಮಾಡಿದ್ದು, ಶಬ್ಧದೃಶ್ಯಕಾವ್ಯದ ಮಧ್ಯೆ ತೊಡಕನ್ನು ಉಂಟು ಮಾಡಿದೆ. ಸ್ಥಳೀಯ ನುಡಿಕಟ್ಟಿನ ಭಾಷೆ ಬಳಸಿದಲ್ಲಿ ಇನ್ನೂ ಹೆಚ್ಚಿನ ಪರಿಣಾಮಕಾರಿ ಆಗುತ್ತಿತ್ತು.

ಬಳಚಿನ ಜೊತೆಗೆ ಮತ್ಸ್ಯಸಂಪತ್ತಿನ ವೈವಿಧ್ಯವೂ ಅಘನಾಶಿನಿಯ ವೈಶಿಷ್ಟ್ಯಗಳಲ್ಲಿ ಒಂದು. ಆದರೆ ಇದರ ಕುರಿತು ಮಾಹಿತಿ ಇಲ್ಲದಿರುವದು ದೊಡ್ಡ ಕೊರತೆ. ಇವೆಲ್ಲ ಕೊರತೆಗಳನ್ನು ಮೀರಿ ನೋಡುಗರ ಮನಸ್ಸನ್ನು ತಲುಪುವಲ್ಲಿ ಚಿತ್ರ ಯಶಸ್ವಿಯಾಗುತ್ತದೆ. ಈ ಸಾಕ್ಷ್ಯಚಿತ್ರ ಆಗಲೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆಚ್ಚುಗೆಗೆ ಪಾತ್ರವಾಗುತ್ತಿದೆ.

(ವೀಡಿಯೊ ಲಿಂಕ್ ಸಂಪರ್ಕಕ್ಕೆ **sumasutaha@gmail.com**)